ಪಿ.ಡಬ್ಲು-**2**

**ದಿ: 07-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಬಿ ಎಸ್ ಡಿ ವಕೀಲರಿಂದ:**

1. ನಾನು 10 ನೇ ತರಗತಿಯವರೆಗೆ ಶಹಾಪುರ ತಾಲೂಕಿನ ಸಾದ್ಯಾಪುರ ಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. 10 ನೇ ತರಗತಿಯವರೆಗೆ ನಾನು ಸಾದ್ಯಾಪುರದಲ್ಲಿದ್ದು ವಿದ್ಯಾಭ್ಯಾಸ ಮಾಡಿರುತ್ತೇನೆ. ಈಗ ನಾನು ಸಾದ್ಯಾಪುರದಲ್ಲಿ ವಾಸ ಮಾಡುತ್ತೇನೆ. ನನ್ನ ಹೊಲ ಮನೆಗಳು ಕಕ್ಕಲದೊಡ್ಡಿಯಲ್ಲಿವೆ. ದಾವೆಯನ್ನು ನನ್ನ ತಂದೆ ಇವರು ಸಲ್ಲಿಸಿರುತ್ತಾರೆ. ಈ ದಾವೆಯನ್ನು ನನ್ನ ತಂದೆ ದೇವಮ್ಮ, ಶಿವಮ್ಮ, ಬನ್ನಮ್ಮ, ತಂಗಮ್ಮ, ನಿಂಗನಗೌಡ, ಮಲ್ಲಮ್ಮ, ಈರಮ್ಮ ಇವರ ಮೇಲೆ ಜಮೀನುಗಳಲ್ಲಿ ಆಸ್ತಿ ಬೇಕು ಎಂದು ಸಲ್ಲಿಸಿರುತ್ತಾರೆ. ಮೇಲೆ ಹೇಳಿದವರನ್ನು ಹೊರತುಪಡಿಸಿ ಬೇರೆಯವರ ಮೇಲೆ ನನ್ನ ತಂದೆಯವರು ದಾವೆ ಮಾಡಿದ್ದಾರೆ ಅವರ ಹೆಸರು ನನಗೆ ನೆನಪಿಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ